C.R.P.67
Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No.123/2022 ಪಿ.ಡಬ್ಲ್ಯೂ-2 ಸಿ.ಡಬ್ಲ್ಯೂ-1

ದಿನಾಂಕಃ- 01.12.2025 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಸತೀಶ್ |
| ತಂದೆಯ ಹೆಸರು | ಮಹದೇವನಾಯಕ |
| ವಯಸ್ಸು | 43 ವರ್ಷ |
| ಉದ್ಯೋಗ | PI, ಜಿಲ್ಲಾ ವಿಶೇಷ ವಿಭಾಗ, ಮೈಸೂರು |
| ವಾಸ | ಮೈಸೂರು |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು 01.09.2018 ರಿಂದ 30.11.2019 ರವರೆಗೆ ಅರಕೆರೆ ಪೊಲೀಸ್ ಠಾಣೆಯಲ್ಲಿ PSI ಕೆಲಸ ಮಾಡಿದ್ದೇನೆ.

2. ನಾನು 26.09.2019 ರಂದು ಸಂಜೆ ಸುಮಾರು 5.20 ಗಂಟೆಗೆ ಠಾಣೆಯಲ್ಲಿ ಇದ್ದಾಗ ಚನ್ನನಕೆರೆ ಗ್ರಾಮದ ವ್ಯಾಪ್ತಿಯಲ್ಲಿರುವ ಜೆ.ಜೆ. ಕ್ರಶರ್ ರಾಮದೇವ್ ಎನ್ನುವರ ಕಲ್ಲುಕ್ವಾರೆಯಲ್ಲಿ ಅಕ್ರಮವಾಗಿ ಬಂಡೆಯನ್ನು ಸಿಡಿಮದ್ದುಗಳಿಂದ ಸಿಡಿಸುತಿದ್ದಾರೆಂದು ಮಾಹಿತಿ ಬಂದಿತ್ತು. ಕೂಡಲೇ ನಾನು ಸಿಬ್ಬಂದಿಯನ್ನು ಕರೆದುಕೊಂಡು ಠಾಣೆಯಿಂದ ಹೊರೆಟೆನು.ನಾನು ಘಟನೆ ನಡೆದಿದೆ ಎನ್ನುವ ಸ್ಥಳದಲ್ಲಿ ತನಿಖೆ ನಡೆಸುವಾಗ ಪಂಚರಾಗಿ ಕೆಲಸ ಮಾಡಲು ಅರಕೆರೆ ಗ್ರಾಮದ ವೃತ್ತ ನಿಂತಿದ್ದ ಅಮೃತರಾಜು ಮತ್ತು ಪ್ರಕಾಶ್ ಎಂಬುವವರಿಗೆ ನೋಟಿಸು ಜಾರಿ ಮಾಡಿ ಪಂಚರಾಗಿ ಕೆಲಸ ಮಾಡುವಂತೆ ಕೇಳಿಕೊಂಡೆನು. ನಾನು ಕೇಳಿಕೊಂಡಂತೆ ಅಮೃತರಾಜು ಮತ್ತು ಪ್ರಕಾಶ್ ಒಪ್ಪಿಕೊಂಡರು.

3. ನಾನು ಸಿಬ್ಬಂದಿಯ ಜೊತೆಯಲ್ಲಿ ಪಂಚರಾದ ಅಮೃತರಾಜು ಮತ್ತು ಪ್ರಕಾಶ್ ಮೇಲೆ ಹೇಳಿದ ಸ್ಥಳಕ್ಕೆ ಸಂಜೆ 6.05 ಗಂಟೆಗೆ ತಲುಪಿ ನೋಡಿದಾಗ 3 ಜನರು ಕ್ವಾರೆಯಲ್ಲಿ ಕುಳಿಯನ್ನು ಹೊಡೆದು ಅಕ್ರಮವಾಗಿ ಬಂಡೆಯನ್ನು ಸಿಡಿಸಲು ಮದ್ದನ್ನು ತುಂಬುತ್ತಿದ್ದು. ನಮ್ಮಗಳನ್ನು ನೋಡಿ ಓಡಿಹೋದರು. ಅವರುಗಳನ್ನು ಹಿಡಿಯಲು ಬೆನ್ನು ಹತ್ತಿದರೂ ಅವರುಗಳು ಸಿಗಲಿಲ್ಲ.

4. ನಾನು ಮತ್ತು ಸಿಬ್ಬಂದಿ ಪಂಚರ ಸಮಕ್ಷಮ ಸ್ಥಳ ಪರಿಶೀಲಿಸಿದಾಗ ಒಂದು ಪ್ಲಾಸ್ಟೀಕ್ ಚೀಲ ಇದರಲ್ಲಿ ಜಿಲಿಟಿನ್ ಕಡ್ಡಿಗಳು ಒಂದು ಪ್ಲಾಸ್ಟಿಕ್ ಚೀಲ ಇದರಲ್ಲಿ ಸುಮಾರು 02 ಕೆ.ಜಿ.ಯಷ್ಟು ಅಮೋನಿಯಂನೈಟ್ರೇಟ್ (ಸ್ಪೋಟಕಕ್ಕೆ ಉಪ ಯೋಗಿಸುವ ವಸ್ತು) ಎಲೆಕ್ಟ್ರಾನಿಕ್ ಡಿಟೋನೇರ್ಟಗಳು ಬೂಸ್ಟರ್ಗಳು ಕಂಡುಬಂದಿದ್ದು ಸದರಿ ಕ್ವಾರೆಯಲ್ಲಿ ಯಾವುದೇ ಪರಾವನಗಿ ಇಲ್ಲದೇ ಅಕ್ರಮವಾಗಿ ಸಿಡಿಮದ್ದನ್ನು ಉಪಯೋಗಿಸಿ ಅಕ್ರಮವಾಗಿ ಸಿಡಿ ಮದ್ದುಗಳನ್ನು ತುಂಬಿಸಿ ಬಂಡೆಗಳನ್ನು ಸಿಡಿಸಿ ಕಳ್ಳತನದಿಂದ ಸಾಗಾಣಿಕೆ ಮಾಡಲು ಪ್ರಯತ್ನಿಸುತ್ತಿರುವುದು ಕಂಡುಬಂದಿದ್ದು.

5. ನಾನು ಮೇಲೆ ಹೇಳಿದ ಘಟನೆಯ ಕುರಿತು ಸ್ಥಳದಲ್ಲಿ ವರದಿಯನ್ನು ತಯಾರು ಮಾಡಿ ಪಿ.ಸಿ.251 ನೇ ನಾಗೇಶ್ ರವರ ಮೂಲಕ ಠಾಣೆಗೆ ಕಳುಹಿಸಿದ್ದೇನೆ. ಠಾಣೆಯಲ್ಲಿ ಇದ್ದ ಎ.ಎಸ್.ಐ ಅವರು ನಾನು ಕಳುಹಿಸಿದ್ದ ವರದಿಯ ಆದಾರದ ಮೇಲೆ ರಾಮ್ ದೇವ್ ಎನ್ನುವವರ ವಿರುದ್ಧ 164/19 ನೇ ಪ್ರಕರಣವನ್ನು ದಾಖಲಿಸಿ ಕೊರ್ಟಿಗೆ ಪ್ರಥಮ ವರ್ತಮಾನ ವರದಿ ಕಳುಹಿಸಿದ್ದಾರೆ ಮತ್ತು ನನಗೆ ಮಾಹಿತಿ ಕಳುಹಿಸಿದ್ದಾರೆ.

6. ನಾನು ಠಾಣೆಯಲ್ಲಿ ಪ್ರಕರಣ ದಾಖಲಾದ ಮಾಹಿತಿ ಬಂದ ನಂತರ ಪಂಚರ ಸಮಾಕ್ಷಮ ಸ್ಥಳದಲ್ಲಿ ಇದ್ದ ಒಂದು ಪ್ಲಾಸ್ಟಿಕ್ ಚೀಲದಲ್ಲಿರುವ 89-ಜಿಲಿಟಿನ್ ಕಡ್ಡಿಗಳು, ಒಂದು ಪ್ಲಾಸ್ಟಿಕ್ ಚೀಲದಲ್ಲಿ ಸುಮಾರು 02 ಕೆ.ಜಿ.ಯಷ್ಟು ಅಮೋನಿಯಂ ನೈಟ್ರೇಟ್ ಇರುತ್ತೆ. (ಸ್ಪೋಟಕಕ್ಕೆ ಉಪಯೋಗಿಸುವ ವಸ್ತು), 63 ಎಲೆಕ್ಟ್ರಾನಿಕ್ ಡಿಟೋನನೇಟರ್ಗಳು, ಬೂಸ್ಟರ್ಗಳು-06 ಗಳನ್ನು ಮಹಜರ್ ಬರೆದು ವಶಪಡಿಸಿಕೊಂಡಿದ್ದೇನೆ.

7. ಈ ಸಾಕ್ಷಿ ಕಡತದಲ್ಲಿರುವ ಪ್ರಥಮ ವರ್ತಮಾನ ವರದಿ ಜೊತೆಯಲ್ಲಿ ಇರುವ ವರದಿ ಮತ್ತು 26.09.2019 ದಿನಾಂಕದ ಮಹಜರ್ ನ್ಯಾಯಾಲಯ ಮೇಲೆ ತನ್ನ ಸಹಿ ಇರುವುದುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿ ಇರುವ ವರದಿಯ ಜೊತೆ ಇರುವ ವರದಿಯನ್ನು ನಿಪಿ-2 ಎಂದು ಈ ಸಾಕ್ಷಿಯ ಸಹಿ ಇರುವ ವರದಿಯನ್ನು ನಿಪಿ-3 ಎಂದೂ ಮತ್ತು ಮಹಜರನ್ನು ನಿಪಿ-4 ಎಂದೂ ಗುರುತಿಸಿಸಲಾಗಿದೆ ಮತ್ತು ಈ ಸಾಕ್ಷಿಯ ಸಹಿಗಳನ್ನು ನಿಪಿ-3 ಎ ಮತ್ತು ನಿಪಿ-4 ಎ ಎಂದೂ ಗುರುತಿಸಲಾಯಿತು.

8. ನಾನು ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಂಡ ವಿಚಾರವನ್ನು ಠಾಣ ಪಿ.ಎಫ್ ನಂ.179/19 ರಲ್ಲಿ ನಮೂದಿಸಿ ಕೋರ್ಟಿಗೆ ವರದಿ ಕಳುಹಿಸಿದ್ದೇನು. ನಾನು ವಶಪಡಿಸಿಕೊಂಡಿದ್ದ ಸ್ಫೋಟಕ ವಸ್ತುಗಳನ್ನು ಮಹಜರ್ನ ಜೊತೆಯಲ್ಲಿ ಸಿ.ಪಿ.ಐ ಕೃಷ್ಣಪ್ಪ ರವರಿಗೆ ಕೊಟ್ಟಿದ್ದೇನೆ.

9.ನಾನು ವಶಪಡಿಸಿಕೊಂಡಿದ್ದ ವಸ್ತುಗಳನ್ನು ತೋರಿಸಿದರೆ ಗುರುತಿಸುತ್ತೇನೆ.

ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ. ಎಂ ವಿ ಆರ್ ವಕೀಲರಿಂದಃ-

1. ನನಗೆ ಈಗ ತೋರಿಸಿದ ದಾಖಲೆಯ ಪ್ರಕಾರ 05.04.2006 ರಿಂದ 20 ವರ್ಷಗಳ ಕಾಲ ಚನ್ನನಕೆರೆ ಗ್ರಾಮದ ಸರ್ವೆ ನಂ.78 ನೇ ಜಮೀನಿನಲ್ಲಿ 1 ಎಕರೆ ವಿಸ್ತೀರ್ಣ ಜಾಗದಲ್ಲಿ ಕಲ್ಲು ಗಣಿಗಾರಿಕೆ ನಡೆಸಲು ಗಣಿ ಇಲಾಖೆಯವರು ಜೆ.ಜೆ. ಮೈನ್ಸ್ ಕಂಪನಿಗೆ 824/19 19.08.2016 ನೇ ಲೈಸನ್ಸ್ ಅನುಮತಿ ಕೊಟ್ಟಿದ್ದಾರೆ ಎನ್ನುವುದು ನಿಜ .

2. ಕಲ್ಲು ಗಣಿಗಾರಿಕೆ ಎಂದರೆ ಬಂಡೆ ಕಲ್ಲುಗಳನ್ನು ಒಡೆಯುವುದು ಸೇರುತ್ತದೆ ಎನ್ನುವುದು ನಿಜ.

3. ನನಗೆ ಈಗ ತೋರಿಸಿದ ದಾಖಲೆಯ ಪ್ರಕಾರ 1 ನೇ ಆರೋಪಿ ರಾಮ್ ದೇವ್ ಮತ್ತು ಚಾಸಾ.4 ನೇ ಆರ್.ಬಾಬು ಬಿನ್ ಚಂದ್ರಶೇಖರ್ ಕಲ್ಲುಬಂಡೆಯನ್ನು ಒಡೆಯಲು 20.03.2019 ರಂದು ಒಂದು ವರ್ಷದ ಅವಧಿಗೆ ಕರಾರು ಆಗಿದೆ ಎನ್ನುವುದು ನಿಜ. ನಾನು ಆರೋಪಿತರ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಮತ್ತು ಈಗ ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u> ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.